# ಕಥೋಪದೇಶ



## ಮಾನವನ ಜೀವಿತ ನೂರು ವರ್ಷ! – ಏಕೆ? ಹೇಗೆ?

ಸಂಗ್ರಹ : ಕಾರ್ತಿಕ್ ಎಂ.ಪಿ. ಮೈಸೂರು

**ಈ** ಕಥೆ ನಡೆದು ಯುಗಗಳೇ ಆಗಿವೆ ಎಂದು ಹೇಳುತ್ತಾರೆ.... ಆದರೆ ಕೇಳಿದ್ದು ಇತ್ತೀಚೆಗಷ್ಟೆ.....

**ಕಥೆ ಹೀಗೆ ಸಾಗುತ್ತದೆ..**

ಆ ಕಾಲದಲ್ಲಿ ಅಂದರೆ, ಬ್ರಹ್ಮ ಸೃಷ್ಟಿಕಾರ್ಯದಲ್ಲಿ ತೊಡಗಿದ್ದಾಗ ಅವನಿಗೆ 'ಮೇಲಿನಿಂದ' ಬಂದ ಆಜ್ಞೆಯಂತೆ ಎಲ್ಲ ಪ್ರಾಣಿಗಳಿಗೂ – ಮನುಷ್ಯನೂ ಸೇರಿದಂತೆ – ಕೇವಲ ನಲವತ್ತು ವರ್ಷಗಳ ಜೀವಿತಾವಧಿಯನ್ನು ಕರುಣಿಸಿದ..

ಅಂದರೆ ಮನುಷ್ಯನಿಗೆ ನಲವತ್ತು ವರ್ಷ ಜೀವಿತ ಅವಧಿಯನ್ನು ಕೊಟ್ಟಂತೆ ಉಳಿದ ಜೀವಿಗಳಿಗೂ – ನಾಯಿ, ಹಂದಿ ಕತ್ತೆ, ಆಮೆ, ಆನೆ, ಗೂಬೆ – ನಲವತ್ತು ವರ್ಷಗಳು ಬದುಕುವ ಅವಕಾಶ ಮತ್ತು ಅನಿವಾರ್ಯತೆ ಎರಡೂ ಉಂಟಾಯಿತು. ಬ್ರಹ್ಮನ ಸೃಷ್ಟಿಯ ಈ ಹೊಸ ನಿಯಮದಿಂದ ಕೆಲವು ಪ್ರಾಣಿಗಳು ಸಂತೋಷದಿಂದ ನಲಿದಾಡಿದವು. ಇನ್ನು ಕೆಲವು ಬೇಸರಗೊಂಡವು. ಮನುಷ್ಯನೂ ಅದರಲ್ಲಿ ಒಬ್ಬ ಎಂದು ಬೇರೆ ಹೇಳಬೇಕಾಗಿಲ್ಲ.



ಆದರೆ ಅವನು ಸುಮ್ಮನೆ ಕೂರುವ ಜಾಯಮಾನದವನೇ? ತನಗೆ ಇಷ್ಟೆಲ್ಲಾ ಬುದ್ಧಿಶಕ್ತಿ ಕೊಟ್ಟೂ ಕೇವಲ ನಲವತ್ತು ವರ್ಷ ಜೀವಿತಾವಧಿ ಕೊಟ್ಟರೇನು ಪ್ರಯೋಜನ ಎಂದು ಬ್ರಹ್ಮನನ್ನೇ ಕೇಳಿಬಿಟ್ಟ. ಬ್ರಹ್ಮ ತಾನು ಅಸಹಾಯಕ ಎಂದು ಕೈಚೆಲ್ಲಿದ. ಆದರೆ ಈ ಮಾನವ ಸುಮ್ಮನೆ ಬಿಡುವವನಲ್ಲ ಎಂದು ತಿಳಿದು, ಉಳಿದ ಪ್ರಾಣಿಗಳೇನಾದರೂ ಸ್ವ-ಇಚ್ಛೆಯಿಂದ ತಮ್ಮ ಜೀವಿತಾವಧಿಯ ಕೆಲವು ವರ್ಷಗಳನ್ನು ಕೊಟ್ಟರೆ ಅವನು ಹೆಚ್ಚು ದಿನ ಬದುಕಬಹುದೆಂದೂ, ಆದರೆ ಯಾವ ಪ್ರಾಣಿ ಎಷ್ಟು ವರ್ಷ – ಇದರ ಆಯ್ಕೆ ಮತ್ತು ಅದನ್ನು ಒಪ್ಪಿಸುವ ಹೊಣೆ ಮಾತ್ರ ಮನುಷ್ಯನದು ಎಂದು ಅವನಿಗೆ ಹೇಳಿದ.



ಸರಿ. ಮನುಷ್ಯನ ಹುಡುಕಾಟ ಶುರುವಾಯಿತು. ಮೊದಲನೆಯದಾಗಿ ಅವನು ಹೋದದ್ದು ಕತ್ತೆಯ ಬಳಿ! ಕತ್ತೆಗೆ ನಲವತ್ತು ವರ್ಷ ಜೀವಿಸುವ ಅವಕಾಶ ಇದ್ದರೂ, ಅಷ್ಟು ವರ್ಷಗಳು ಅದು ಜೀವಿಸಿ ಮಾಡುವುದು ಏನನ್ನು? ಭಾರ ಹೊರುವುದನ್ನು! ಈಗ ಹದಿನೈದು-ಇಪ್ಪತ್ತು ವರ್ಷಗಳು ಭಾರ ಹೊರುವ ಕರ್ಮ ಇರುವಾಗ ಉಳಿದ ಇಪ್ಪತ್ತು ವರ್ಷಗಳೂ ಅದೇ ಕರ್ಮ ಅನುಭವಿಸಬೇಕೇ? ಎಂದೆಲ್ಲ ಭಯಂಕರ ಭವಿಷ್ಯವನ್ನು ಹೇಳಿ ಹೆದರಿಸಿ ಅದರಿಂದ ಇಪ್ಪತ್ತು ವರ್ಷಗಳನ್ನು ಪಡೆದುಬಿಟ್ಟ. ಹಾಗೆ ತಾನೇ ಕತ್ತೆಗೆ ಉಪಕಾರ ಮಾಡುತ್ತಿರುವೆನೆಂಬ ಧೋರಣೆಯಲ್ಲಿ...



ಎರಡನೆಯದು ನಾಯಿ. ನಾಯಿಯನ್ನು ಓಲೈಸುವುದು ಕಷ್ಟವೇನಾಗಲಿಲ್ಲ. ಅದೂ ತನ್ನ ಇಪ್ಪತ್ತು ವರ್ಷಗಳನ್ನು ಕೊಟ್ಟದ್ದು ಮಾನವ ಹೇಳಿದ ಅದರ ಭಯಂಕರ ಭವಿಷ್ಯವನ್ನು ಊಹಿಸಿಕೊಂಡು – ಬೈಗುಳ, ಹಸಿವು, ಚಳಿಯಲ್ಲಿ ನರಳಾಟ, ಉಳಿದ ನಾಯಿಗಳ ಕಾಟ, ಎಲ್ಲಕ್ಕಿಂತ ಮಾನವರ ಕಲ್ಲಿನ ಹೊಡೆತದಿಂದ ಪಾರಾಗಲು ಪದೇ ಪದೇ ಓಟ..